ಒ. ಎಸ್. ನಂ.358 /2022

ಪಿಡಬ್ಲೂ-1

ದಿನಾಂಕಃ 13.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ಸರ್ವೆ ನಂಬರ್ 2/28 ರ ಸ್ವತ್ತಿಗೆ ದಾವೆ ಸಲ್ಲಿಸಿರುತ್ತೇನೆ. ನನ್ನ ಗಂಡನ ಹೆಸರು ಹುಚ್ಚನಾಯಕ, ಅವರು ಸುಮಾರು 12 ವರ್ಷಗಳ ಹಿಂದೆ ತೀರಿಹೋಗಿರುತ್ತಾರೆ. ದಿನಾಂಕ ಗೊತ್ತಿಲ್ಲ. ನನ್ನ ಗಂಡನವರಿಗೆ 3 ಜನ ಅಣ್ಣ ತಮ್ಮಂದಿರು ಅವರೆಂದರೆ, ವೆಂಕಟನಾಯಕ, ಕುಳ್ಳ ಅಂಕನಾಯಕ ಮತ್ತು ಹುಚ್ಚನಾಯಕ. ಕುಳ್ಳ ಅಂಕನಾಯಕರವರನ್ನು ಹುಚ್ಚನಾಯಕ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ದಾವಾಸ್ತಿಗೆ ಸಂಬಂಧಪಟ್ಟಂತೆ ನಮ್ಮ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವಾ ಪ್ರತಿವಾದಿ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆ ಪ್ರತಿವಾದಿ ಪರ ಡಿಕ್ರಿ ಆಗಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪ್ರತಿವಾದಿಗಳು ಹುಣಸೂರು ನ್ಯಾಯಾಲಯ ಕ್ಕೆ ಮೇಲ್ಮನವಿ ಸಲ್ಲಿಸಿರುತ್ತಾರೆ, ಸದರಿ ನ್ಯಾಯಾಲಯದಲ್ಲಿ ವಜಾ ಅಗಿರುತ್ತದೆ. ಪ್ರತಿವಾದಿಗಳು ಸಲ್ಲಿಸಿದ ದಾವೆ ಡಿಕ್ರಿಯಾದ ನಂತರ ನಾನು ಆರ್ ಎ 31/2005 ರಂತೆ ಮೇಲ್ಮನವಿ ಸಲ್ಲಿಸಿರುತ್ತೆನೆ ಎಂದರೆ ಸರಿ. ಸದರಿ ಮೇಲ್ಮನವಿ ದಿನಾಂಕ 26.07.2010 ರಂದು ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿ ವಿರುದ್ದ ಹುಚ್ಚ ನ್ಯಾಯಾಲಯ ದಲ್ಲಿ ಮತ್ತೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಅಗಿರುತ್ತದೆ ಎಂದರೆ ಸರಿಯಲ್ಲ.

ಕುಳ್ಳ ಅಂಕನಾಯಕ ಅಲಿಯಾಸ್ ಹುಚ್ಚನಾಯಕ ರವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ಅವರ ಹೆಂಡತಿ ಜೀವಂತಾಗಿರುತ್ತಾರೆ. ಅವರು ಬದುಕ್ಕಿದ್ದಾಗ ಅವರ ಯೋಗಕ್ಷೇಮವನ್ನು ಪ್ರತಿವಾದಿ 1 ರವರು ನೋಡಿಕೊಳ್ಳುತ್ತಿದ್ದರು ಎಂದರೆ ಗೊತ್ತಿಲ್ಲ. ಕುಳ್ಳ ಅಂಕನಾಯಕ 5 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ಕುಳ್ಳ ಅಂಕನಾಯಕ ರವರಿಗೆ ಮಕ್ಕಳಿಲ್ಲದ ಕಾರಣ ದಾವಾಸ್ತಿಯನ್ನು ವೆಂಕಟನಾಯಕ ರವರ ಮಕ್ಕಳಿಗೆ ಮರಣ ಶಾಸನ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿ ನನ್ನ ಗಂಡನಿಗೆ ಸೇರಿದ್ದು ಎಂದು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಖಾತೆಯನ್ನು ಪ್ರಶ್ನಿಸಿ ಪ್ರತಿವಾದಿ 1 ರಿಂದ 3 ರವರು ಹುಣಸೂರು ಎ ಸಿ ನ್ಯಾಯಾಲಯ ಪ್ರಶ್ನಿಸಿದ್ದರು ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ನನಗಾಗಿರುವ ಖಾತೆಯನ್ನು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, 100 ರೂ ವೆಚ್ಚದೊಂದಿಗೆ ನೀಡಲಾಯಿತು.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ